# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ
## <u>ಸಿ.ಸಿಃ 1477/2022</u>

ಫ್ರಾಸಾ-5, ಚಾಸಾ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಮಾದೇಶ್ |
| ತಂದೆಯ ಹೆಸರು | : | ಶ್ರೀಧರ |
| ವಯಸ್ಸು | : | 36ವರ್ಷ |
| ಉದ್ಯೋಗ | : | ರಿಯಲ್ ಎಸ್ಟೇಟ್ |
| ವಾಸ | : | ಬೆಂಗಳೂರು |

ಸಾಕ್ಷಿಗೆ ದಿನಾಂಕಃ 16.07.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಸಾಕ್ಷಿಗೆ ದೂರು ಮತ್ತು ಮಹಜರ್ ಅನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರ್ತಿಸಿದ್ದು, ದೂರನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ನಿಪಿ-1 ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಇ) ಎಂದು ಗುರುತಿಸಲಾಯಿತು. ನಾನು ಈ ಹಿಂದೆ ನಂಜನಗೂಡು ಮುಖ್ಯರಸ್ತೆಯಲ್ಲಿರುವ ಅದ್ವೈತ್ ಜೆಸಿಬಿ ಶಾಖೆಯಲ್ಲಿ ಅಕೌಂಟಂಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ಸದರಿ ಅದ್ವೈತ್ ಜೆಸಿಬಿ ಶಾಖೆಯಲ್ಲಿ ಕಳ್ಳತನವಾಗಿರುತ್ತದೆ.

ಈ ಬಗ್ಗೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1 ಮತ್ತು 4ಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-1 ಮತ್ತು 4ರಲ್ಲಿರುವ ಯಾವುದೇ ವಿಚಾರಗಳು ನನಗೆ ತಿಳಿದಿರುವುದಿಲ್ಲ. ನಾನು ಈ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆಯಾವುದೇ ಮಾಹಿತಿ ಇರುವುದಿಲ್ಲ.

(ಮಾನ್ಯ ಎಪಿಪಿರವರರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕಃ 29.08.2018 ರಂದು ಬೆಃ 9 ಗಂಟೆ ಸಮಯಕ್ಕೆ ಅದ್ವೈತ್ ಜೆಸಿಬಿ ಶಾಖೆಗೆ ಎಂದಿನಂತೆ ಕೆಲಸಕ್ಕೆ ಬಂದಿದ್ದು, ಆ ದಿನ ಜೆಸಿಬಿ ಬಿಡಿಭಾಗಗಳನ್ನು ಮಾರಾಟ ಮಾಡುತ್ತಾ ರೂ 36,800/- ಹಣವನ್ನು ಸ್ಟೂರ್ ಇನ್ ಚಾರ್ಜ್ ಬಸವರಾಜು ರವರು ಟೇಬಲ್ ನಲ್ಲಿರುವ ಡ್ರಾ ನಲ್ಲಿ ಇಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿಃ 30.08.2018 ರಂದು ಬೆಃ 8.50 ಗಂಟೆ ಸಮಯಕ್ಕೆ ಪಕ್ಕದ ಟ್ರಾಕ್ಟರ್ ಶೋ ರೋ ಮ್ಯಾನೇಜರ್ ರಘುರವರು ದೂರವಾಣಿ ಕರೆ ಮಾಡಿ ನಮ್ಮ ಅಂಗಡಿಯ ರೂಲಿಂಗ್ ಶೆಟ್ಟರ್ ಒಡೆದಿರುತ್ತಾರೆ ಎಂದು ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ನಮ್ಮ ಅಂಗಡಿಯ ರೂಲಿಂಗ್ ಶೆಟ್ಟರ್ ನ್ನು ಸ್ವಲ್ಪ ಮೇಲಕ್ಕೆ ಎತ್ತಿದ್ದು, ಒಳಗೆ ಹೋಗಿ ನೋಡಿದಾಗ ಟೇಬಲ್ ಡ್ರಾ ನಲ್ಲಿಟ್ಟಿದ್ದ ಹಣ ಕಳ್ಳತನವಾಗಿರುತ್ತದೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ನಿಪಿ-4ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನುದೂರು ನೀಡಿದ ನಂತರ ಪೊಲೀಸರು ಅದೇ ದಿನ ಅದ್ವೈತ್ ಜೆಸಿಬಿ ಶಾಖೆಗೆ ಬಂದಿದ್ದು, ನಿಪಿ-1ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ನಿಪಿ-1ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಅದ್ವೈತ್ ಜೆಸಿಬಿ ಶಾಖೆಯಲ್ಲಿ ಇಟ್ಟಿದ್ದ ರೂ. 1,38,834/-ಹಣವನ್ನು ಕಳುವು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ಥಳ ಮಹಜರ್ ಕಾಲದ ಫೋಟೋಗಳನ್ನು ನೋಡಿ ಗುರ್ತಿಸಿರುವುದಿಲ್ಲ.

ದಿಃ 02.02.2019 ರಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಬರಮಾಡಿಕೊಂಡು ಠಾಣೆಯಲ್ಲಿದ್ದ ಆರೋಪಿತರನ್ನು ತೋರಿಸಿ ಇವರೇ ಅದ್ವೈತ್ ಶಾಖೆಯಲ್ಲಿ ದಿಃ 29.08.2018 ರಂದು ಕಳ್ಳತನ ಮಾಡಿರುವುದಾಗಿ ತಿಳಿಸಿದ್ದು, ನಾನು

ಆರೋಪಿತರನ್ನು ಗುರ್ತಿಸಿ ಈಗ ಓದಿ ಹೇಳಿದಂತೆ ನನ್ನ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.

## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
## ಚಾಮರಾಜನಗರ
## ಸಿ.ಸಿಃ 1477/2022

**ಫ್ರಾಸಾ–6, ಚಾಸಾ–6**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜು |
| ತಂದೆಯ ಹೆಸರು | : | ರಂಗಯ್ಯ |
| ವಯಸ್ಸು | : | 33ವರ್ಷ |
| ಉದ್ಯೋಗ | : | ಸ್ಟೂರ್ ಇನ್ ಚಾರ್ಜ್ ಕೆಲಸ |
| ವಾಸ | : | ಟಿ.ನರಸೀಪುರ |

ಸಾಕ್ಷಿಗೆ ದಿನಾಂಕಃ 16.07.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಸಾಕ್ಷಿಗೆ ದಿಃ 02.02.2019ರ ಅಮಾನತ್ತು ಮಹಜರ್ ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಮಹಜರ್ ನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನಿಪಿ–6ಕ್ಕೆ ನಾನು ಈಗ್ಗೆ 7 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ, ಅದರಲ್ಲಿರುವ ಬರೆದಿರುವ ಯಾವುದೇ ವಿಚಾರಗಳು ನನಗೆ ತಿಳಿದಿರುವುದಿಲ್ಲ. ಸಾಕ್ಷಿ ಅಮಾನತ್ತು ಮಹಜರ್ ಕಾಲದ ಫೋಟೋಗಳನ್ನು ನೋಡಿ ಗುರ್ತಿಸಿರುವುದಿಲ್ಲ.

3 ಮತ್ತು 4ನೇ ಆರೋಪಿ ತರು ತೋರಿಸಿದ ಸ್ಥಳದಲ್ಲಿ ಜರುಗಿಸಿದ ಮಹಜರ್ ಅನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಮಹಜರ್ ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ನಿಪಿ–7ಕ್ಕೆ ನಾನು ಈಗ್ಗೆ 7 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ, ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿರುವುದಿಲ್ಲ. ಮಹಜರ ಕಾಲದ ನಾಲ್ಕು ಫೋಟೋಗಳನ್ನು

ತೋರಿಸಲಾಗಿ ಸಾಕ್ಷಿ ನೋಡಿ ಗುರ್ತಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಕ್ಯಾಶ್ ಬಾಕ್ಸನ್ನು ನೋಡಿ ಗುರ್ತಿಸಿರುವುದಿಲ್ಲ.

(ಮಾನ್ಯ ಎಪಿಪಿರವರರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕಃ 02.02.2019 ರಂದು ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ನನ್ನನ್ನು ಮತ್ತು ಚಾಸಾ-2ರವರನ್ನು ಪೊಲೀಸ್ ಠಾಣೆಗೆ ಬರಮಾಡಿಕೊಂಡು ಠಾಣೆಯಲ್ಲಿದ್ದ ಆರೋಪಿತರನ್ನು ತೋರಿಸಿ ಪ್ರಕರಣದ ವಿಚಾರ ತಿಳಿಸಿ, ಆರೋಪಿತರು ತಾವು ಅದ್ವೈತ್ ಜೆಸಿಬಿ ಶಾಖೆಯಲ್ಲಿ ಕಳುವು ಮಾಡಿದ್ದ ರೂ. 1,38,834/-ರೂ.ಗಳನ್ನು ಸಮನಾಗಿ ಹಂಚಿಕೊಂಡು ಖರ್ಚು ಮಾಡಿಕೊಂಡಿರುವುದಾಗಿ ಹೇಳಿರುತ್ತಾರೆ ಎಂದು ತಿಳಿಸಿದ್ದು, ಕಳುವು ಮಾಡಿದ್ದ ಕ್ಯಾಶ್ ಬಾಕ್ಸನ್ನು ಗುಡ್ಡದ ಬಳಿ ಬಿಸಾಕಿದ್ದು, ನಮ್ಮೊಡನೆ ಬಂದರೇ ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ನನ್ನನ್ನು ಮತ್ತು ಚಾಸಾ-2ರವರನ್ನು ಹಾಗೂ ಆರೋಪಿತರನ್ನು ಪೊಲೀಸರು ಎಡಬೆಟ್ಟಕ್ಕೆ ಹೋಗುವ ದಾರಿಗೆ ಕರೆದುಕೊಂಡು ಹೋಗಿದ್ದು, ಆರೋಪಿತರು 3 ಮತ್ತು 4ರವರು ತಾವೇ ಮುಂದಾಗಿ ಗುಡ್ಡದ ಬಳಿಯಿರುವ ಒಂದು ಮರದ ಕೆಳಗಡೆ ಕರೆದುಕೊಂಡು ಹೋಗಿದ್ದು, ಅಲ್ಲಿ ಬಿದ್ದಿದ್ದ ಕ್ಯಾಶ್ ಬಾಕ್ಸನ್ನು ತೋರಿಸಿದ ಮೇರೆಗೆ ಪೊಲೀಸರು ನಿಪಿ-6ರಂತೆ ಮಹಜರ್ ಮಾಡಿ, ಸದರಿ ಕ್ಯಾಶ್ ಬಾಕ್ಸನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ನಿಪಿ-6ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 02.02.2019 ರಂದು 3 ಮತ್ತು 4ನೇ ಆರೋಪಿತರು ನನ್ನ ಮತ್ತು ಚಾಸಾ-2ರವರ ಸಮಕ್ಷಮ ತಾವು ಕಳುವು ಮಾಡಿದ ಸ್ಥಳವಾದ ಅದ್ವೈತ್ ಜೆಸಿಬಿ ಶಾಖೆಯಲ್ಲಿ ತಾವು ಕಳುವು ಮಾಡಿದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ನಿಪಿ-7 ರಂತೆ ಮಹಜರ್ ಮಾಡಿದ್ದು, ಆಗ ನಾನು ನಿಪಿ-7ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ

ಎಲ್ಲಾ ವಿಚಾರಗಳ ಬಗ್ಗೆ ನಾನು ಈಗ ಓದಿ ಹೇಳಿದಂತೆ ದಿಃ 02.02.2019ರಂದು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.